ಅದರ ಬಗ್ಗೆಯೂ ಪರಿಶೀಲಿಸುತ್ತೇವೆ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಮಾತನಾಡಿ, ರೇಟ್ ಜಾಸ್ತಿಯಾಗಿದೆ, ಹೆಚ್ಚು– ಕಡಿಮೆಯಾಗಿದೆ ಎಂದರು From 50 ಮತ್ತು 53 ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ, ಅಂದರೆ, regularize ಮಾಡುವುದಕ್ಕೆ ಏನು fees ಜಾಸ್ತಿ ಇದೆಯೆಂಬ ಮಾತನ್ನು ಹೇಳಿದರು 20x30 ಅಳತೆಗೆ 94(c) ನಲ್ಲಿ ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ನಾವು ಯಾವ ಸೈಟುಗಳನ್ನು allot ಮಾಡುತ್ತೇವೋ, ಅಲ್ಲಿ 20x30 ಸೈಟುಗಳಿದ್ದರೆ, ಅದು ಉಚಿತವಾಗಿದೆ ಅದನ್ನು ನಾವು ಉಚಿತವಾಗಿ ಕೊಡುತ್ತೇವೆ ಅದಕ್ಕೂ ಹಿಂದೆ ಏನು ವಿಸ್ತರಣೆ ಇದೆ, ಅದಕ್ಕೆ ಮಾತ್ರ ನಾವು charge ಮಾಡುತ್ತೇವೆ ಆದರೆ, market rateಗಿಂತಲೂ ಕಡಿಮೆ ಇರುತ್ತದೆ ಆದರೂ ಇವತ್ತು ಅವರು ಏನು ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಅದು difference ಬಹಳ ಇದೆ ಎಂಬುದಾಗಿದೆ ಅದರ ಬಗ್ಗೆ ನಾನು ಕೂಲಂಕಷವಾಗಿ ವಿಚಾರಣೆ ಮಾಡಿ, ಅತಿಯಾಗಿ ಜಾಸ್ತಿಯಾಗಿದ್ದರೆ, ಅದನ್ನು ಕಡಿಮೆಗೊಳಿಸುವ ಬಗ್ಗೆ ಪರಿಶೀಲಿಸುತ್ತೇವೆ

ರಾಜ್ಯದ ಅರಣ್ಯ ಭೂಮಿ

153 (1378) ಶ್ರೀ ಡಿ ಆರ್ ಪಾಟೀಲ್ (ಗದಗ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ ?

ಅ) ರಾಜ್ಯದಲ್ಲಿ ಸರ್ಕಾರಿ ಒಡೆತನದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ?

ಆ) ಖಾಸಗಿ ಒಡೆತನದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ?

ಇ) ಇದು ರಾಜ್ಯದ ಒಟ್ಟು ಭೌಗೋಲಿಕ ಕ್ಷೇತ್ರದಲ್ಲಿಯ ಪಾಲು ಎಷ್ಟು ?

ಈ) ಅರಣ್ಯ ಸಮಿತಿಗಳ ಉಸ್ತುವಾರಿಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ?

ಉ) ರಾಜ್ಯದಲ್ಲಿ ಪಂಚಾಯಿತಿ ಮಟ್ಟದಲ್ಲಿ ಅರಣ್ಯ ಸಮಿತಿಗಳನ್ನು ರಚಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) 43,35,639 ಹೆಕ್ಟೇರುಗಳು

ಆ) 5,407 ಹೆಕ್ಟೇರುಗಳು

ಇ) ರಾಜ್ಯದ ಒಟ್ಟು ಭೌಗೋಳಿಕ ಕ್ಷೇತ್ರ ಅಂದರೆ, 1,91,79,100 ಹೆಕ್ಟೇರ್‌ಗೆ ಹೋಲಿಸಿದಲ್ಲಿ ರಾಜ್ಯ ಅರಣ್ಯ ವಿಸ್ತೀರ್ಣ ಶೇಕಡಾ 22 61 ಇರುತ್ತದೆ

ಈ) ಒಟ್ಟು 3,40,391 ಹೆಕ್ಟೇರ್‌ಗಳು

ಉ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಇಇ 50 ಎಫ್‌ಎಪಿ 2000 ಬೆಂಗಳೂರು, ದಿನಾಂಕ 5–2–2004 ರ ಪ್ರಕಾರ ಪಂಚಾಯತ್ ಕಾಯ್ದೆ

ಅಧಿನಿಯಮ 61(ಎ) ರಲ್ಲಿ ಅವಕಾಶವಿರುವಂತೆ ಅರಣ್ಯೇತರ ಪ್ರದೇಶದಲ್ಲಿ ಅನುಷ್ಟಾನಗೊಳಿಸುವ ಸಾಮಾಜಿಕ ಅರಣ್ಯ ಮತ್ತು ಖಾಸಗಿ ಜಮೀನುಗಳಲ್ಲಿ ಅನುಷ್ಟಾನಗೊಳಿಸುವ ಕೃಷಿ ಅರಣ್ಯ ಕಾರ್ಯಕ್ರಮಗಳ ಉಸ್ತುವಾರಿಗೆ ಪಂಚಾಯತಿಗಳಲ್ಲಿ ಉಪ ಸಮಿತಿಗಳನ್ನು ರಚಿಸಬಹುದಾಗಿದೆ

ಮುಂದುವರೆದು, ಕ್ಷೀಣಿತ ಅರಣ್ಯ ಪ್ರದೇಶಗಳ ಅಭಿವೃದ್ಧಿಗೆ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಅರಣ್ಯ ಸಮಿತಿಗಳನ್ನು ರಚನೆ ಮಾಡಲು ಅವಕಾಶವಿರುವುದಿಲ್ಲ

ಆದರೆ, ಸರ್ಕಾರಿ ಆದೇಶ ಸಂಖ್ಯೆ ಎಫ್‌ಇಇ 50 ಎಫ್‌ಎಪಿ 2000 ಬೆಂಗಳೂರು, ದಿನಾಂಕ 19–6–2002 ರ ಅನ್ವಯ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಗ್ರಾಮದ ಒಂದು ಭಾಗಕ್ಕೆ ಅಥವಾ ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಸಮೂಹಕ್ಕೆ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ ಅವುಗಳ ಸಹಭಾಗಿತ್ವದೊಂದಿಗೆ ಅರಣ್ಯ ರಕ್ಷಣೆ, ಅಭಿವೃದ್ಧಿ ಮತ್ತು ಅರಣ್ಯ ನಿರ್ವಹಣೆ ಕೆಲಸಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಒಂದು ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಗ್ರಾಮಗಳು ಸೇರುವ ಸಾಧ್ಯತೆ ಇರುತ್ತದೆ ಎಲ್ಲಾ ಗ್ರಾಮಗಳ ವ್ಯಾಪ್ತಿಯಲ್ಲಿ ಕ್ಷೀಣಿತ ಅರಣ್ಯ ಪ್ರದೇಶ ಇರುತ್ತದೆಯೋ, ಆ ಗ್ರಾಮಕ್ಕೆ ಅರಣ್ಯ ಅಭಿವೃದ್ಧಿ, ರಕ್ಷಣೆ ಉಸ್ತುವಾರಿಯನ್ನು ಆಸಕ್ತಿ ವಹಿಸಿ ಮಾಡಿದರೆ ಅದರ ಪ್ರತಿಫಲವನ್ನು ಪಡೆಯುತ್ತಾರೆ ಪಂಚಾಯಿತಿ ವ್ಯಾಪ್ತಿಗೆ ಅರಣ್ಯ ಸಮಿತಿಯನ್ನು ರಚಿಸಿದರೆ ಯಾವ ಗ್ರಾಮಕ್ಕೆ ಅರಣ್ಯ ಪ್ರದೇಶ ಸೇರುವುದಿಲ್ಲವೋ ಅವರೂ ಸಹಾ ಪ್ರತಿಫಲವನ್ನು ಅನುಭವಿಸಲು ಮುಂದೆ ಬಂದು, ಇದರಿಂದ ಗ್ರಾಮಗಳ ಮಧ್ಯದಲ್ಲಿ ತಕರಾರುಉದ್ಭವಿಸುವ ಸಾಧ್ಯತೆ ಇರುತ್ತದೆ ಆದ್ದರಿಂದ ಅರಣ್ಯ ಪ್ರದೇಶ ಇರುವ ಗ್ರಾಮಕ್ಕೆ ಮಾತ್ರ ಗ್ರಾಮ ಅರಣ್ಯ ಸಮಿತಿ ರಚಿಸುವುದು ಸೂಕ್ತವಾಗಿರುತ್ತದೆ ಈ ಹಿನ್ನೆಲೆಯಲ್ಲಿ ಗ್ರಾಮ ಮಟ್ಟದಲ್ಲಿಯೇ ಅರಣ್ಯ ಸಮಿತಿಯನ್ನು ರಚಿಸಲು ಸರ್ಕಾರದ ಆದೇಶವಾಗಿರುತ್ತದೆ

ಒಂದು ವೇಳೆ, ಅರಣ್ಯೇತರ ಪ್ರದೇಶದಲ್ಲಿಯೂ ಅರಣ್ಯೀಕರಣ ಮಾಡಲು ಉದ್ದೇಶಿಸಿ, ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲು ಪಂಚಾಯಿತಿಗೆ ಸೇರಿದ ಎಲ್ಲಾ ಗ್ರಾಮಗಳು ಇಚ್ಛಿಸಿದರೆ ಅಂತಹ ಕಡೆಗೆ ಪಂಚಾಯಿತಿ ಮಟ್ಟದಲ್ಲಿಯೂ ಸಹ ಅರಣ್ಯ ಸಮಿತಿಯನ್ನು ರಚಿಸಬಹುದಾಗಿದೆ

ಶ್ರೀ ಡಿ ಆರ್ ಪಾಟೀಲ್ ಮಾನ್ಯ ಅಧ್ಯಕ್ಷರೆ, ಗ್ರಾಮ ಅರಣ್ಯ ಸಮಿತಿಯನ್ನು ಏನು ರಚನೆ ಮಾಡುತ್ತೀರಿ, ಅದಕ್ಕೆ 100 hectares minimum ಇರಬೇಕೆಂದು ಒಂದು Government Order ಇದೆ ಆ ಮಿತಿ ಏಕೆ ಇಡುತ್ತೀರಿ ? ಒಂದು ಎಕರೆ ಇದ್ದರೂ ಸಹ ಗ್ರಾಮ ಅರಣ್ಯ ಸಮಿತಿಯ ಉಸ್ತುವಾರಿಯಲ್ಲೇ ಅದರ ರಕ್ಷಣೆ, ಬೆಳವಣಿಗೆ ಮತ್ತು ಅದರ ಫಲ ಏನು ಸಿಗುತ್ತದೆ, ಅದು ಗ್ರಾಮ

ಸಮುದಾಯಕ್ಕೆ ಸಿಗುವಂತೆ ವ್ಯವಸ್ಥೆ ಮಾಡುವುದಕ್ಕೆ ನಿಮಗೆ ತೊಂದರೆ ಏನಿದೆ ? ಅನಂತರ, ಕ್ಷೀಣಿತ ಅರಣ್ಯ ಭೂಮಿಗೆ ಮಾತ್ರ ಗ್ರಾಮ ಅರಣ್ಯ ಸಮಿತಿ ಎಂದು ಹೇಳುತ್ತೀರಿ, ಒಟ್ಟಿನಲ್ಲಿ ಅಲ್ಲಿ ಯಾವುದೇ ಅರಣ್ಯ ಇರಲಿ, ಕ್ಷೀಣಿತ ಅರಣ್ಯವೇ ಏಕಿರಬೇಕು? ಬೆಳೆದ ಅರಣ್ಯ ಇದ್ದರೂ ಸಹ ಅದು ಸಮುದಾಯದ ಉಸ್ತುವಾರಿಯಲ್ಲಿರಬೇಕು ಬರೀ ನಿಮ್ಮ ಅಧಿಕಾರಿಗಳ ಉಸ್ತುವಾರಿಯಲ್ಲಿಯೇ ಇರಲೆಂದು ಏಕೆ ಅಪೇಕ್ಷಿಸುತ್ತೀರಿ ? ಅದನ್ನು ಮಾಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಸಿ ಚನ್ನಿಗಪ್ಪ ಸನ್ಮಾನ್ಯ ಅಧ್ಯಕ್ಷರೆ, JBIC Scheme ಪ್ರಕಾರ ಆಧುನಿಕ forest ಅನ್ನು ಬೆಳೆಸಬೇಕಾದ ಸಮಯದಲ್ಲಿ ನೂರು ಎಕರೆಗಿಂತಲೂ ಕಡಿಮೆ ಇರುವಂಥಾದ್ದನ್ನು ಇದಕ್ಕೆ ಕೊಡಬಾರದೆಂದು ಕಾನೂನು ಮಾಡಿದ್ದಾರೆ ಅದರಡಿಯಲ್ಲಿ ಇವತ್ತು ಮಾನ್ಯ ಹಿರಿಯ ಸದಸ್ಯರು ಉತ್ತಮವಾದ ಪ್ರಶ್ನೆ ಕೇಳಿದ್ದಾರೆ ಅವರ ಪ್ರಕಾರ ಇವತ್ತು ಗ್ರಾಮ ಅರಣ್ಯ ಸಮಿತಿಗಳನ್ನು ನಾವು ಬಲಪಡಿಸಿದ್ದೇವೆ ಒಟ್ಟಾರೆ 4,700 ಗ್ರಾಮ ಅರಣ್ಯ ಸಮಿತಿಗಳಿವೆ ಅವು ಕ್ಷೀಣಿತ ಅರಣ್ಯ ಪ್ರದೇಶಗಳಿಗೆ ಮಾತ್ರ ಕೊಡಬೇಕೆಂಬ ಆರ್ಡರ್ ಅನ್ನು ಹಿಂದೆ ಮಾಡಿದ್ದರು ಆ ಆರ್ಡರ್ ಪ್ರಕಾರ ನಾವು ಅದನ್ನು ಸಮ ಮಾಡಿಕೊಂಡು ಇವತ್ತಿನವರೆಗೂ ಬಂದಿದ್ದೇವೆ ತಾವು ಹೇಳಿದಂತೆ, ಅದನ್ನು ನಾವು ಪರಿಶೀಲನೆ ಮಾಡಿ ನೋಡಿದಾಗ, Village Forest Committeeಗಳನ್ನು ಗ್ರಾಮ ಅರಣ್ಯ ಪ್ರದೇಶಗಳಲ್ಲಿ ಬರುವ ಖಾಲಿ ಜಾಗಗಳಿರಬಹುದು, ಗೋಮಾಳ ಇರಬಹುದು, ಅಥವಾ ಗುಂಡು ತೋಪುಗಳಿರಬಹುದು ಅವುಗಳನ್ನು ನಾವು ಗ್ರಾಮ ಅರಣ್ಯ ಸಮಿತಿಗಳಿಗೆ ಸೇರಿಸಿಕೊಂಡು ಅದರಿಂದ ಉತ್ಪನ್ನ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಾವೇನು ಸಲಹೆ, ಸೂಚನೆ ಕೊಟ್ಟಿದ್ದೀರಿ, ಅದು ಸತ್ಯವಾಗಿದೆ ಅದು Practical ಆಗಿ ಬೇಕೇ ಬೇಕು ತಮ್ಮ ಪತ್ರ ಬಂದ ಮೇಲೆ ಮೊನ್ನೆ ಸಹ ಇದರ ಬಗ್ಗೆಒಂದು ಸಭೆಯನ್ನು ಮಾಡಿದ್ದೇವೆ ನಮ್ಮ ಅಧಿಕಾರಿಗಳಿಗೆ ಇದರ ಬಗ್ಗೆ ಸೂಚನೆಯನ್ನು ಈಗಾಗಲೇ ಕೊಟ್ಟಿದ್ದೇನೆ ಆ ಪ್ರಕಾರ 2–5–10 ಎಕರೆ ಇರಲಿ ಅದು ಆ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ರೀತಿ V F C ಮಾಡುವುದರ ಮೂಲಕ ಅದರ ಅಭಿವೃದ್ಧಿ ವಸ್ತುಗಳನ್ನು ಅವರು ಉಪಯೋಗ ಮಾಡಲು ಅನುಕೂಲ ಮಾಡಬೇಕೆಂದು ತಾವೇನು ಸಲಹೆ ಕೊಟ್ಟಿದ್ದೀರಿ ಅದರ ಪ್ರಕಾರ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ ಸದ್ಯದಲ್ಲಿ ಅದರ ಬಗ್ಗೆ ಮತ್ತೊಂದು ಸಭೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ

ಶ್ರೀ ಆರಗಜ್ಞಾನೇಂದ್ರ ಮಾನ್ಯ ಉಪಾಧ್ಯಕ್ಷರೆ, ಜಂಟಿ ಅರಣ್ಯ ಸಮಿತಿ ಯೋಜನೆ ಬಹಳ ಒಳ್ಳೆಯ ಯೋಜನೆ ಏಕೆಂದರೆ ಗ್ರಾಮಾಂತರ ಪ್ರದೇಶದ

ಜನರ ಸಹಯೋಗವೂ ಕಾಡು ಬೆಳೆಯಲು ಬೇಕು ಆ ದೃಷ್ಟಿಯಿಂದ ಅದನ್ನು ಮಾಡಿದ್ದೀರಿ ಆದರೆ, ಅರಣ್ಯ ನ್ಯೂನತೆ ಏನೆಂದರೆ ನಿಮ್ಮ ಅಧಿಕಾರಿಗಳು ಬಂದಂಥ ಹಣವನ್ನು ಅಲ್ಲಿ ಏನು ಖರ್ಚು ಮಾಡುತ್ತೀರಿ ಅದನ್ನು ಜಂಟಿ account ನಲ್ಲಿಡಬೇಕು ಆದರೆ ನಿಮ್ಮ ಅಧಿಕಾರಿಗಳು joint accountಗೆ ಹಾಕುವುದೇ ಇಲ್ಲ ಎಲ್ಲೋ ಒಂದು ಲಕ್ಷ ರೂಪಾಯಿ ಹಾಕುತ್ತಾರೆ ಉಳಿದಿರುವುದನ್ನು ನಾನು ಗಿಡ, ಬೇಲಿ ಹಾಕಿಸುತ್ತೇನೆ ನೀನು ಸುಮ್ಮನಿರಪ್ಪ ಎಂದು ಜಂಟಿ ಅರಣ್ಯ ಸಮಿತಿಯ ಅಧ್ಯಕ್ಷರನ್ನು ನಾಮಕಾವಸ್ಥೆಗೆ ಮಾಡಿದ್ದಾರೆ ನಿಮ್ಮ ಅಧಿಕಾರಿಗಳೇ ಅದನ್ನು ಮಾಡುತ್ತಿದ್ದಾರೆ ಇದು ಹೋಗಬೇಕು ಇವತ್ತು ಇಡೀ ಊರಿನ ಸಹಯೋಗ ಅದರಲ್ಲಿ ಬರಬೇಕೆಂದರೆ ನಿಮ್ಮ ಹಣಕಾಸಿನ ವಹಿವಾಟನ್ನು ನಿಮ್ಮ forester ಮತ್ತು ಅಧ್ಯಕ್ಷ ಜಂಟಿಯಾಗಿ ನಿರ್ವಹಿಸುವ ಕೆಲಸವನ್ನು ಮಾಡಿದಾಗ ಮಾತ್ರ ಅದು ಸರಿಯಾಗುತ್ತದೆ ಆದರೆ ಕೆಲಸ ımplementatıon ಇನ್ನು ಸರಿಯಾಗಿ ಆಗುತ್ತಿಲ್ಲ ನಾನೂ ಕೂಡ ನಮ್ಮ ಅಧಿಕಾರಿಗಳನ್ನು ಕರೆದು ಮೊನ್ನೆ ಹೇಳಿದ್ದೇನೆ ಅಷ್ಟೂ ಹಣವನ್ನು ಜಂಟಿ ಖಾತೆಗೆ ಹಾಕಿ ಅನಂತರ ಅವರೊಂದಿಗೆ ಚರ್ಚೆ ಮಾಡಿ meetıng ನಿರ್ಣಯದ ಪ್ರಕಾರ ಮಾಡಿ ಎಂದು ಹೇಳಿದ್ದೇನೆ ಇದರ ಬಗ್ಗೆ ತಾವು ಕಟ್ಟುನಿಟ್ಟಾದ ಆದೇಶ ಹೊರಡಿಸುವ ಅಗತ್ಯ ಇದೆಯೆಂದು ನನ್ನ ಭಾವನೆ

ಶ್ರೀ ಸಿ ಚನ್ನಿಗಪ್ಪ ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರನ್ನು ಒಳಗೊಂಡಂತೆ ಶಿವಮೊಗ್ಗಕ್ಕೆ ನಾನು ಹೋಗಿದ್ದಾಗ ಒಂದು ಸಭೆಯನ್ನೂ ಮಾಡಿದ್ದೇನೆ ಆ ಸಭೆಯಲ್ಲಿ ಮಾನ್ಯ ಸದಸ್ಯರು ಆ ವಿಚಾರವನ್ನು ಹೇಳಿದ್ದರು ಆ ಪ್ರಕಾರ ನಾವು ಇವತ್ತು ಜಂಟಿ ಖಾತೆಯನ್ನೇನು ಮಾಡಬೇಕು, ಅಲ್ಲಿನ ಗ್ರಾಮ ಅಭಿವೃದ್ಧಿ ಸಮಿತಿಯವರೆಗೆ ಏನು ಇವತ್ತು cheque operate ಮಾಡುತ್ತೀರಿ ಎಲ್ಲ ಕೆಲಸವನ್ನು ಅವರ ಮೂಲಕವೇ ಮಾಡಿ ಅದರ ಸಲಹೆಯ ಮೂಲಕವೇ ಮಾಡಬೇಕೆಂದು ಆದೇಶ ಮಾಡಿದ್ದೇವೆ ಶಿವಮೊಗ್ಗದಲ್ಲಿ ಮತ್ತೊಂದು ಸಭೆಯನ್ನು ಕರೆದು ಆ ಕೆಲಸ ಆಗದಿದ್ದರೆ ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಡಿ ಆರ್ ಪಾಟೀಲ್ ಸೀಮಿತ ಅರಣ್ಯ ಮತ್ತು ಬೋಳಾದ ಅರಣ್ಯ, ಗೋಮಾಳ ಇದಕ್ಕೆ ಮಾಡುತ್ತೇವೆಂದು ಹೇಳಿದಿರಿ ಇದೇ ರೀತಿ ಅರಣ್ಯ ಪ್ರದೇಶಕ್ಕೂ ಜಂಟಿ ಅರಣ್ಯ ಸಮಿತಿ ಮಾಡಲು ತೊಂದರೆ ಏನು ? ಊರಿಗೆ ಸೇರಿದಂತೆ ಅರಣ್ಯ ಪ್ರದೇಶವಿದ್ದರೆ ಅದೂ ಕೂಡ ಜಂಟಿ ಅರಣ್ಯ ಸಮಿತಿಯ ಅಡಿಯಲ್ಲಿ ಬರಲು ಏನು ತೊಂದರೆ ? ಸಮೂದಾಯ ಸಹಭಾಗಿತ್ವದಿಂದ ಅದರ ರಕ್ಷಣೆ, ಅಭಿವೃದ್ಧಿ, ಅದರ ಫಲಗಳನ್ನು ಮಾರಾಟ ಮಾಡುವ ವ್ಯವಸ್ಥೆ ಬರಲಿ ಅದರಿಂದ ಏನು ತೊಂದರೆ ? ಅದನ್ನು ತಾವು ಮಾಡುತ್ತೀರೋ ? ಅದನ್ನು 2–3 ತಿಂಗಳಿನಲ್ಲಿ ಮಾಡುತ್ತೇನೆ ಎಂಬ ಭರವಸೆ ತಮ್ಮಿಂದ ಬರಬೇಕು

ಮಾಡುತ್ತೇವೆಂದು ಅದನ್ನು ಮುಂದಕ್ಕೆ ಹಾಕುವುದು ಬೇಡ ನಿಮಗೆ ಅಧಿಕಾರ ಇರುವುದು ಅಕ್ಟೋಬರ್ 3ರವರೆಗೆ ತಾವು ಅಕ್ಟೋಬರ್ 2ರ ಒಳಗೆ ಇದರ ಬಗ್ಗೆ ನಿರ್ಣಯ ಮಾಡುತ್ತೇವೆಂದು ಭರವಸೆಯನ್ನು ಸದನಕ್ಕೆ ಕೊಡಬೇಕೆಂದು ಕೇಳುತ್ತೇನೆ

ಶ್ರೀ ಸಿ ಚನ್ನಿಗಪ್ಪ ಅರಣ್ಯ ಪ್ರದೇಶದ ಒಟ್ಟಾರೆ control ಯಾರ ಹತ್ತಿರ ಇದೆ ಎಂಬುದು ಹಿರಿಯ ಸದಸ್ಯರಾದ ತಮಗೆ ಗೊತ್ತಿದೆ ಸುಪ್ರಿಂ ಕೋರ್ಟ್ ಒಂದು ಆದೇಶ ಮಾಡಿದೆ ಅದರ ಪ್ರಕಾರ ಯಾವುದೇ ತೀರ್ಮಾನ ಮಾಡುವಾಗ ಸುಪ್ರಿಂ ಕೋರ್ಟ್‌ನ ತೀರ್ಪು ಏನಿದೆ ಅದರ ಆಧಾರದ ಮೇಲೆಯೇ ಮಾಡಬೇಕೆಂದು ಕಟ್ಟುನಿಟ್ಟಾಗಿ ಆದೇಶ ಮಾಡಿದ್ದಾರೆ ಆ ಪ್ರಕಾರ ನಮ್ಮ ರಾಜ್ಯದ ಒಟ್ಟಾರೆ ವಿಸ್ತೀರ್ಣದ 22 64% ಅರಣ್ಯವೇನಿದೆ ಅದರಲ್ಲಿ ಯಾವುದೇ ಪ್ರದೇಶದಲ್ಲಿ ಒಂದು ಎಕರೆ ಬಿಡಬೇಕಾದರೆ ಅಥವಾ ಸೇರಿಸಬೇಕಾದರೆ ನಾವು ಸುಪ್ರಿಂ ಕೋರ್ಟ್‌ನ ಆದೇಶವನ್ನು ಮುಂದಿಟ್ಟುಕೊಂಡು ಕೆಲಸ ಮಾಡಬೇಕಾಗಿದೆ ತಮಗೆ ಗೊತ್ತಿದೆ ಈ ಹಿಂದೆ ಏನು ಬೇಕಾದರೂ ಮಾಡಬಹುದಿತ್ತು ಆದರೆ 1980ರ ನಂತರ ಆ ಕಾನೂನಿನ ಪ್ರಕಾರ ಸುಪ್ರಿಂ ಕೋರ್ಟ್ ಸಂಪೂರ್ಣವಾದ ಜವಾಬ್ದಾರಿಯನ್ನು ಇಟ್ಟುಕೊಂಡು ಒಂದು ಕಮಿಟಿ ಮಾಡಿಕೊಂಡು ಅದರ ಉಸ್ತುವಾರಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತಾರೆ ನಮ್ಮ ಅಧಿಕಾರಿಗಳೂ ಈಗ ಕೈಕಟ್ಟಿಕೊಂಡಿದ್ದಾರೆ ಅಧಿಕಾರಿಗಳು ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ತಾವು ಹೇಳಿದಂತೆ ಅರಣ್ಯವನ್ನೂ ಒಟ್ಟಾರೆ ಸಹಭಾಗಿತ್ವದಲ್ಲಿ ಮಾಡಬೇಕೆಂಬುದು ಸತ್ಯ ಅದನ್ನು ಮಾಡಬೇಕು ಅರಣ್ಯ ಪ್ರದೇಶ ಜನರಿಗೆ ಸೇರಿರತಕ್ಕದ್ದು, ಅದು ಜನರ ಮತ್ತು ರಾಜ್ಯದ ಆಸ್ತಿ ಆದರೆ ಸುಪ್ರಿಂ ಕೋರ್ಟ್ ಇಲ್ಲಿ ಮಧ್ಯದಲ್ಲಿ ಬಾಯಿ ಹಾಕಿರುವ ಕಾರಣ ಸುಪ್ರಿಂ ಕೋರ್ಟ್‌ನ ಆದೇಶವನ್ನು ಇಲ್ಲಿ ಉಲ್ಲಂಘನೆ ಮಾಡಲು ಬರುವುದಿಲ್ಲ ಆದರೂ ತಾವು ಸಲಹೆ ಕೊಟ್ಟಿದ್ದೀರಿ ಇದರ ಬಗ್ಗೆ ನಾವು ತಮ್ಮನ್ನು ಕರೆದು ವೈಜ್ಞಾನಿಕವಾಗಿ ಚಿಂತನೆ ನಡೆಸಿ ಸುಪ್ರಿಂ ಕೋರ್ಟ್‌ನ ಆದೇಶದ ಮೇರೆಗೆ ಏನು ಮಾಡಬಹುದು ಎಂಬ ಬಗ್ಗೆ ಪ್ರಯತ್ನ ಮಾಡುತ್ತೇವೆ

ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಗೆ ವಿಶೇಷ ಪ್ಯಾಕೇಜ್

154 (1366) ಶ್ರೀ ಶ್ರೀರಾಮರೆಡ್ಡಿ ಜಿ ಏ (ಬಾಗೇಪಲ್ಲಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಅನುಕೂಲಕ್ಕಾಗಿ ವಿಶೇಷ ಪ್ಯಾಕೇಜ್ ಪ್ರಕಟಿಸಿದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ ?

ಅಪ್ಪಾ ಸಾಹೇಬ(ಅಪ್ಪು) ಮಲ್ಲಪ್ಪ ಪಟ್ಟನ ಶೆಟ್ಟಿ (ಜವಳಿ ಸಚಿವರು)